ಕನ್ನಡಪ್ರಭ

# ಜೈನ್ ವಿವಿ ಕ್ರೀಡಾ ಸಾಧಕರಿಗೆ ಸನ್ಮಾನ




ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ ಜೈನ್ ವಿಶ್ವವಿದ್ಯಾಲಯ ವತಿಯಿಂದ ಸನ್ಮಾನಿತಗೊಂಡ ಕ್ರೀಡಾಪಟುಗಳು.

ಕನ್ನಡಪ್ರಭ ಚಿತ್ರ

**ಬೆಂಗಳೂರು:** ಕಳೆದೆರಡು ವರ್ಷದ ಕ್ರೀಡಾ ಋತುಗಳಲ್ಲಿ ಉತ್ತಮ ಸಾಧನೆ ಮಾಡಿದ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ವತಿಯಿಂದ ಸನ್ಮಾನಿಸಲಾಯಿತು. ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ ಪದಕದ ಗೌರವ ಪಡೆದ, ದಾಖಲೆಗಳನ್ನು ಮಾಡಿದ ಹಾಗೂ ದಕ್ಷಿಣ ವಲಯ ಮತ್ತು ಅಂತರ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ಪಡೆದ ಸಾಧನೆ ಮಾಡಿರುವ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಸ್ಮರಣೆಗೆ ಹಾಗೂ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಐಪಿಎಲ್ ಹಾಗೂ ರಣಜಿ ತಂಡಗಳಲ್ಲಿ ಆಡಿದ ಸಂಸ್ಥೆಯ ಆಟಗಾರರನ್ನೂ ಇದೇ ವೇಳೆ ಗೌರವಿಸಲಾಯಿತು.

**ಸನ್ಮಾನಿತರು: 2013-14ನೇ ಸಾಲು:** ಕ್ರೀಡಾಳುಗಳಾದ ಪೂರ್ವಾ ಕಿರಣ್ ಶೆಟ್ಟಿ (ಈಜು), ರೂಪಾ (ಟೇಕ್ವಾಂಡೊ), ನಿಶ್ರೇಯಸ್ (ಕತ್ತಿವರಸೆ), ಪುರುಷರ ಕ್ರಿಕೆಟ್ ತಂಡ, ಮಹಿಳೆಯರ ಬ್ಯಾಡ್ಮಿಂಟನ್ ತಂಡ, ಪುರುಷರ ಬಾಸ್ಕೆಟ್‌ಬಾಲ್ ತಂಡ, ಮಹಿಳೆಯರ ಟೆನಿಸ್, ಪುರುಷರ ಕತ್ತಿವರಸೆ ತಂಡಗಳು

**2014-15ನೇ ಸಾಲು:** ಪುರುಷರ ಯಾಚಿಂಗ್ ತಂಡ, ಮೀನಾಕ್ಷಿ ವಿಕೆಆರ್ (ಈಜು), ರಕ್ಷಿತ್ ಶೆಟ್ಟಿ (ಈಜು), ರೂಪಾ ಎಸ್ (ಟೇಕ್ವಾಂಡೊ), ಕತ್ತಿವರಸೆ ತಂಡ, ಪುರುಷರ ಬಾಸ್ಕೆಟ್‌ಬಾಲ್ ತಂಡ, ಮಹಿಳೆಯರ ಬಾಸ್ಕೆಟ್‌ಬಾಲ್ ತಂಡ, ಮಹಿಳೆಯರ ಟೆನಿಸ್ ತಂಡ, ಪುರುಷರ ಯಾಚಿಂಗ್ ತಂಡ.